ಬಾಲಿವುಡ್

# ಹೆಗಲ ಮೇಲೆ ಭಾರದ ಸುಖ!

ಬಾಲಿವುಡ್‌ನಲ್ಲಿ ಈಗ ಮಹಿಳಾ ಪ್ರಧಾನ ಚಿತ್ರದ ಜಮಾನ ಎನ್ನುವುದು ಹಲವರ ಅಂಬೋಣ. ಕೆಲವು ಗೆಲುವುಗಳು ಅದಕ್ಕೆ ಪುಷ್ಟಿ ನೀಡಿದೆ. ಕಂಗನಾ ರನೋಟ್, ವಿದ್ಯಾ ಬಾಲನ್, ಅನುಷ್ಕಾ ಶರ್ಮಾ, ಸೋನಂ ಕಪೂರ್, ಅಲಿಯಾ ಭಟ್ ಮುಂತಾದ ನಟಿಯರು, ನಾಯಕರಿಗೆ ಪೈಪೋಟಿ ನೀಡುವಂತೆ ಸಿನಿಮಾಗಳನ್ನು ಗೆಲ್ಲಿಸಿರುವ ಉದಾಹರಣೆಗಳು ನಮಗೆ ಸಿಗುತ್ತಿವೆ. ಇದು ಮಹಿಳಾ ಪ್ರಧಾನ ಎಂಬ ಹಣೆಪಟ್ಟಿಯ ಜತೆಗೆ ಸಶಕ್ತ ಕಥೆಗಳ ಸೃಷ್ಟಿಗೂ ಪ್ರೇರಣೆ ನೀಡಿದೆ. ಹಾಗೆಯೇ ಅನೇಕ ನಟಿಯರಿಗೂ ತಮ್ಮ 'ನಾಯಕತ್ವ'ದ ಸಿನಿಮಾ ಬರಬೇಕು ಎಂಬ ಆಸೆ ಹುಟ್ಟಿಸಿದೆ. ಈ ಪ್ರಯತ್ನದಲ್ಲಿ 'ಅಕಿರಾ' ಚಿತ್ರ ಸೋನಾಕ್ಷಿ ಸಿನ್ಹಾಳ ಬಯಕೆಗೆ ಶಕ್ತಿಮದ್ದು ತುಂಬಿತ್ತು. ಸೋನಾಕ್ಷಿ ಮುಖ್ಯ ಪಾತ್ರದಲ್ಲಿ ನಟಿಸಿದ್ದ ಚಿತ್ರ ಗಳಿಕೆ ವಿಚಾರದಲ್ಲಿ ಹಿಂದೆ ಬೀಳಲಿಲ್ಲ. ಈಗ 'ನೂರ್' ಸಿನಿಮಾದ ಮೂಲಕ ಮತ್ತೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾಳೆ ಸೋನಾಕ್ಷಿ.

ಏಕಾಂಗಿಯಾಗಿ ಸಿನಿಮಾದ ಭಾರವನ್ನು ಹೆಗಲ ಮೇಲೆ ಹೊರುವುದು ತನಗೆ ಕಷ್ಟವಾಗುವುದಿಲ್ಲ. ಬದಲಾಗಿ ತನ್ನನ್ನು ಹೆಚ್ಚು ಸ್ವತಂತ್ರಗೊಳಿಸುತ್ತದೆ ಎಂದು ಹೇಳಿಕೊಂಡಿದ್ದಾಳೆ ಆಕೆ. 'ಸಿನಿಮಾದ ಹೊಣೆ ಹೊರುವುದು ಕಷ್ಟವೋ ಸುಲಭವೋ ಗೊತ್ತಿಲ್ಲ. ಆದರೆ ನಾನು ಪ್ರಚಾರ ಮಾಡಿದಾಗ ಒಂದು ಸ್ವಾತಂತ್ರ್ಯದ ಸುಖ ಸಿಗುತ್ತದೆ. 'ಅಕಿರಾ' ಚಿತ್ರದ ಪ್ರಚಾರದ ವೇಳೆ ಈ ಅನುಭವ ಆಗಿದೆ. ಈ ಸಿನಿಮಾವನ್ನು ಕೊಂಡೊಯ್ಯಲು ನಾನು ಯಾರ ಮೇಲೂ ಅವಲಂಬಿಸಬೇಕಿಲ್ಲ. ನನಗೆ ಅದ್ಭುತ ತಂಡದ ಬೆಂಬಲವಿದೆ. ಮುಖ್ಯವಾಗಿ ನನಗೆ ಯಾರ ಅಗತ್ಯವೂ ಇಲ್ಲ' ಎಂದಿದ್ದಾಳೆ ಸೋನಾಕ್ಷಿ.

'ನಾನು ಸ್ವತಂತ್ರೆ, ಶಕ್ತಿವಂತೆ ಎನಿಸುತ್ತಿದೆ. ಎಲ್ಲಕ್ಕೂ ಮಿಗಿಲಾದ ಭಾವವೆಂದರೆ, ಇಡೀ ಸಿನಿಮಾವನ್ನು ನನ್ನದೇ ಹೆಗಲ ಮೇಲೆ ಹೊರಬಲ್ಲೆ ಎಂಬ ಖುಷಿ' ಎಂದು ತನ್ನ ಸಾಮರ್ಥ್ಯದ ಕುರಿತು ಹೆಮ್ಮೆಯಿಂದ ಬೀಗಿದ್ದಾಳೆ ಆಕೆ.





# ಕಂಗನಾ ಮೇಲೆ ಕರಣ್ ಕೋಪ!

ಬಾಲಿವುಡ್ ತನ್ನನ್ನು ಯಾವ ರೀತಿ ಅವಮಾನಿಸಿದೆ, ಕಡೆಗಣಿಸಿದೆ ಎಂದು ನಿರಂತರವಾಗಿ ಹೇಳಿಕೆ ನೀಡುವ ಮೂಲಕ ಸುದ್ದಿಯಲ್ಲಿರುವಾಕೆ ಕಂಗನಾ ರನೋಟ್. ಇದು ಸಾಮಾಜಿಕ ಜಾಲತಾಣಗಳಲ್ಲಿ ಬಿರುಸಿನ ಚರ್ಚೆಗೂ ಎಡೆಮಾಡಿಕೊಡುತ್ತಿರುತ್ತದೆ. ಕಂಗನಾಳ ಈ ಹೇಳಿಕೆಗಳಿಂದ ನಿರ್ಮಾಪಕ–ನಿರ್ದೇಶಕ ಕರಣ್ ಜೋಹರ್ ರೋಸಿ ಹೋಗಿದ್ದಾನೆ. ಬಾಲಿವುಡ್ ತನ್ನನ್ನು ಶೋಷಿಸಿದೆ ಎಂದು ಆರೋಪಿಸುವುದು ಮತ್ತು ತನ್ನನ್ನು ಬಲಿಪಶು ಎಂದು ಬಿಂಬಿಸಿಕೊಳ್ಳುವುದನ್ನು ಕರಣ್ ಕಟುವಾಗಿ ಟೀಕಿಸಿದ್ದಾನೆ.

"ದೊರಕುವ ಪ್ರತಿ ಅವಕಾಶದಲ್ಲಿಯೂ ನೀವು ಬಲಿಪಶುವಾಗಲು ಸಾಧ್ಯವಿಲ್ಲ. 'ಕೆಟ್ಟ' ಬಾಲಿವುಡ್ ತನ್ನಲ್ಲಿ ಹೇಗೆ ಭಯ ಹುಟ್ಟಿಸುತ್ತಿದೆ ಎಂಬ ದುಃಖದ ಕಥೆಯನ್ನು ಪದೇ ಪದೇ ಹೇಳಲಾಗದು. ಮಹಿಳೆ ಮತ್ತು ಬಲಿಪಶು ಎಂಬ ಫಲಕಗಳನ್ನು ಇಟ್ಟುಕೊಂಡು ಕಂಗನಾ ಆಡುತ್ತಿರುವುದನ್ನು ನೋಡಿ ನನಗೆ ಸಾಕಾಗಿದೆ" ಎಂದು ಕರಣ್ ಆಕೆಯ ಮೇಲೆ ಕಿಡಿಕಾರಿದ್ದಾನೆ.

ಇತ್ತೀಚೆಗೆ 'ಕಾಫಿ ವಿತ್ ಕರಣ್' ಕಾರ್ಯಕ್ರಮದಲ್ಲಿ ಕಂಗನಾ, ಕರಣ್ ವರ್ತನೆ ಮೇಲೆ ಚಾಟಿ ಬೀಸಿದ್ದಳು. 'ನನ್ನ ಜೀವ ಚರಿತ್ರೆ ಕುರಿತು ಸಿನಿಮಾ ಮಾಡಿದರೆ, ಅದರಲ್ಲಿನ ಮಾಫಿಯಾದಲ್ಲಿ ಅಹಂಕಾರದ ಮತ್ತು ಹೊರಗಿನವರ ಬಗ್ಗೆ ಅತಿಯಾದ ಅಸಹಿಷ್ಣುತೆ ಹೊಂದಿರುವ ರೂಢ ಮಾದರಿಯ ಬಾಲಿವುಡ್ ಮುಖಂಡ ಹಾಗೂ ಸ್ವಜನಪಕ್ಷಪಾತದ ಮುಖ್ಯ ರೂವಾರಿಯ ಪಾತ್ರಕ್ಕೆ ಕರಣ್ ಜೋಹರ್ ಅತಿ ಸೂಕ್ತ ವ್ಯಕ್ತಿ' ಎಂದು ಕಂಗನಾ ನೇರವಾಗಿ ಏಟು ನೀಡಿದ್ದಳು.

'ನನ್ನ ಷೋದಲ್ಲಿ ಈ ವಿಚಾರಗಳನ್ನು ಅಳಿಸಿ ಹಾಕಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಜಗತ್ತು ಆಕೆಯ ಮಾತುಗಳನ್ನು ಕೇಳಿಸಿಕೊಳ್ಳಲಿ. ಆಕೆ ಹೇಳಿಕೊಳ್ಳಲಿ ಎಂದು ವೇದಿಕೆ ನೀಡಿದೆ' ಎಂದು ಕರಣ್ ಹೇಳಿದ್ದಾನೆ.

■ ಅಮಿ